UASB Library
Newspaper Clippings
Wednesday 23-02-2022 Pg .1
Jai Kisan



ದಕ್ಷಿಣ ಏಷ್ಯಾದ ಉತ್ಪನ್ನಗಳಿಗೆ ವಿಶೇಷ ಮಾರುಕಟ್ಟೆ

ಜಿಕೆವಿಕೆಯಲ್ಲಿ ಪೆನೇಷಿಯಾ 10ನೇ ಮೇಳ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ಅಂತಾರಾಷ್ಟ್ರೀಯಮಟ್ಟದಲ್ಲಿ ದಕ್ಷಿಣ ಏಷ್ಯಾದ ನೈಸರ್ಗಿಕ ಪದಾರ್ಥಗಳ ಸಾವಯವ ಮತ್ತು ಆರೋಗ್ಯ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವಲ್ಲಿ ಯಶಸ್ವಿಯಾಗಿರುವ ಪೆನೇಷಿಯಾ ಪ್ರಸಕ್ತ ಸಾಲಿನಲ್ಲಿ 10ನೇ ಆವೃತ್ತಿಯ ಮೇಳ ಸಂಘಟಿಸುವುದಕ್ಕೆ ವೇದಿಕೆ ಸಜ್ಜುಗೊಳಿಸಿದೆ. ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದ (ಜಿಕೆವಿಕೆ) ಆವರಣದಲ್ಲಿ 'ಪೆನೇಷಿಯಾ-2022' ಹತ್ತನೇ ಆವೃತ್ತಿಯ ಮೇಳವು ಮೇ 6 ರಿಂದ 8ರವರೆಗೆ ನಡೆಯಲಿದೆ. ದಕ್ಷಿಣ ಏಷ್ಯಾದ ಉತ್ಪನ್ನಗಳಿಗೆ ವಿಶೇಷ ಮಾರುಕಟ್ಟೆ, ಹಿಂದೆಂದೂ ಕಂಡರಿಯದ ವಹಿವಾಟು ಅವಕಾಶಗಳನ್ನು ಆಗುಮಾಡಲೆಂದು ಪ್ರಮುಖ ಉದ್ಯಮ ಸಂಘ-ಸಂಸ್ಥೆಗಳು ಈ ಮೇಳಕ್ಕೆ ಒತ್ತಾಸೆಯಾಗಿವೆ. ಹೊಸ ನೈಸರ್ಗಿಕ ಮತ್ತು ಸಾವಯವ ಉತ್ಪನ್ನಗಳಿಗೆ ಸರಿಸಾಟಿಯಿಲ್ಲದ ವ್ಯಾಪಾರ ಕುದುರಿಸಲು ಹಾಗೂ ಸೇವೆ ಒದಗಿಸುವುದಕ್ಕೆ ಪೆನೇಷಿಯಾ-2022 ಪ್ರಮುಖ ವೇದಿಕೆಯಾಗಲಿದ್ದು, ಯಶೋಗಾಥೆ ಮುಂದುವರಿಯುವ ವಿಶ್ವಾಸವನ್ನು ಹೊಂದಿದೆ.

ಪ್ರದರ್ಶನದ ವೈಶಿಷ್ಟ್ಯ: ಶಿಷಿಡೊ ಕಮ್ಯುನಿಕೇಷನ್ಸ್ 2002ರಿಂದ ಪ್ರತಿ ಎರಡು ವರ್ಷಗಳಿಗೊಮ್ಮೆ ಸಂಘಟಿಸುವ ಪ್ರತಿಷ್ಠಿತ, ಮಹತ್ವದ ಮೇಳವು ಸಾವಯವ ಆಹಾರ ಪದಾರ್ಥ ಮತ್ತು ನೈಸರ್ಗಿಕ ಉತ್ಪನ್ನಗಳು ಮಾತ್ರವಲ್ಲ, ಸಹಜ ಮತ್ತು ಆರೋಗ್ಯ ಪೂರ್ಣ ಜೀವನದ ಜಾಗೃತಿ ಮೂಡಿಸುತ್ತಿದೆ. ಹೀಗಾಗಿ ಕಳೆದ ಎರಡು ದಶಕಗಳಿಂದ ಎಲ್ಲ ಬಗೆಯ ನೈಸರ್ಗಿಕ ಉತ್ಪಾದಿಸುವ ಕಂಪನಿಗಳಿಗೆ ಪೆನೇಷಿಯಾ ಏಕೈಕ ಪ್ರಧಾನ ವೇದಿಕೆಯಾಗಿದ್ದು, ವಿಪುಲ ವಹಿವಾಟು ಅವಕಾಶಗಳನ್ನು ಒದಗಿಸುವ ಮೂಲಕ ಬಲತುಂಬಿದೆ.

ತರಹೇವಾರಿ ಪ್ರದರ್ಶನ: ದೇಶದ ಅತಿದೊಡ್ಡ ನೈಸರ್ಗಿಕ ಉತ್ಪನ್ನ ಮೇಳವಾಗಿರುವ ಪೆನೇಷಿಯಾದಲ್ಲಿ ಹಲವು ವಿಭಾಗಗಳಿದ್ದು, ಅಪರಿಮಿತವಾಗಿವೆ.

ಕೃಷಿ ಉತ್ಪನ್ನಗಳು: ಆಹಾರಧಾನ್ಯ, ಸಿರಿಧಾನ್ಯ, ದ್ವಿದಳಧಾನ್ಯ, ಬೇಳೆಕಾಳು, ಸಾಂಬಾರು ಪದಾರ್ಥಗಳು, ಬೆಲ್ಲ ಇತರ ಸಹಿ ಪದಾರ್ಥಗಳು, ಪಶು ಪೌಷ್ಟಿಕ ಆಹಾರ, ಸಾಗರ ಉತ್ಪನ್ನಗಳು, ಜಾನುವಾರು, ಯಂತ್ರೋಪಕರಣಗಳು.

ಆಹಾರ ಮತ್ತು ಪಾನೀಯ: ನೈಸರ್ಗಿಕ, ಸಾವಯವ ಆಹಾರಗಳು, ಆಹಾರ ಪದಾರ್ಥಗಳು, ಪೌಷ್ಟಿಕ ಪಾನೀಯಗಳು ಇತ್ಯಾದಿ. ಇದಲ್ಲದೇ ಆರೋಗ್ಯ ಮತ್ತು ಪೌಷ್ಟಿಕ, ವ್ಯಕ್ತಿಗತ ಕಾಳಜಿ, ಪರಿಸರ ಸ್ನೇಹಿ ಉತ್ಪನ್ನಗಳ ವಿಭಾಗಗಳಿರಲಿವೆ.

ವಿವರಗಳಿಗೆ ಸಂಪರ್ಕಿಸಿರಿ: ಶಿಷಿಡೊ ಕಮ್ಯುನಿಕೇಷನ್ಸ್: ಮೊಬೈಲ್/ ವಾಟ್ಸ್‌ಆ್ಯಪ್: 9819512127 ಅಥವಾ 9869333310

e-mail: seishidocommunications @gmail com / panaceanaturalexpo india@gmail.com

Website: www naturalproductsexpoindia.com

23-02-2022 Vv Pg 07

ಹೊಸ ರುಚಿ ಸಂಪಾಜೆಯ ರೈತ ಮಹಿಳೆ ವಸಂತಲಕ್ಷ್ಮಿ ಯವರಿಂದ ತೆಂಗಿನ ಉತ್ಪನ್ನ | ಥಾಯ್ಲೆಂಡ್‌ನಲ್ಲಿ ಸಿಗುವ ತಿನಿಸು ಕೊಡಗಲ್ಲೂ ಲಭ್ಯ, 1 ಕಪ್‌ಗೆ 40 ರು.

ಎಳನೀರು ಜೆಲ್ಲಿ ತಿನ್ನಬೇಕೆ? ಬನ್ನಿ ಮಡಿಕೇರಿಯ ದೇವರಕೊಲ್ಲಿಗೆ

• ಕೃಷ್ಣಮೋಹನ ತಲೆಂಗಳ

ಕನ್ನಡಪ್ರಭ ವಾರ್ತೆ ಮಂಗಳೂರು

ನೀವು ಮಡಿಕೇರಿ-ಮಂಗಳೂರು ಹೆದ್ದಾರಿಯಲ್ಲಿ ಸಾಗುತ್ತಿದ್ದರೆ ಮಡಿಕೇರಿಯಿಂದ 19 ಕಿ.ಮೀ. ಮುಂದೆ ದೇವರಕೊಲ್ಲಿ ಎಂಬಲ್ಲಿ ರಬ್ಬರ್ ತೋಟದ ನಡುವೆ ಪುಟ್ಟದೊಂದು ಹಳ್ಳಿ ಕ್ಯಾಂಟೀನ್ ಎದುರು ಕಾರುಗಳ ಸಾಲು ಕಂಡರೆ ಗೊಂದಲಕ್ಕೆ ಒಳಗಾಗಬೇಡಿ. ಅವರು ಅಲ್ಲಿ ನಿಂತಿದ್ದು 'ವಸುಧಾ ಕ್ಯಾಂಟೀನ್'ನಲ್ಲಿ ಸಿಗುವ 'ಎಳನೀರು ಜೆಲ್ಲಿ' ತಿನ್ನಲು!

ಹೌದು, ಮಂಗಳೂರು ಸಮೀಪದ ಕಲ್ಲಡ್ಕದ ಕೆ.ಟಿ. ಚಿಹಾದಷ್ಟೇ ಹೆಸರುವಾಸಿ ದೇವರ ಕೊಲ್ಲಿಯ ಈ ಎಳನೀರು ಜೆಲ್ಲಿ ಕೊಡಗು ಜೆಲ್ಲೆ ಮಡಿಕೇರಿ ತಾಲೂಕು ಬೆಟ್ಟತ್ತೂರು ಗ್ರಾಮದ ದೇವರಕೊಲ್ಲಿಯಲ್ಲಿ ತೆಂಗಿನ ಮೌಲ್ಯವರ್ಧಿತ ಉತ್ಪನ್ನ ಉದ್ದಿಮೆಯನ್ನು ಸಂಪಾಜೆಯ ವಸಂತಲಕ್ಷ್ಮಿ ಹಾಗೂ ಅವರ ಪತಿ ಸುಬ್ರಹ್ಮಣ್ಯ ಭಟ್ ಯಶಸ್ವಿಯಾಗಿ ನಡೆಸುತ್ತಿದ್ದಾರೆ.

ಶುರುವಾಗಿದ್ದು ಹೀಗೆ: ಸಂಪಾಜೆಯಲ್ಲಿ ನೆಲೆಸಿರುವ ಈ ರೈತ ದಂಪತಿಗೆ ಅಡಕೆ, ತೆಂಗಿನ ತೋಟವಿದೆ. ಕಾಡುಪ್ರಾಣಿಗಳಹಾವಳಿಯಿಂದ ಫಸಲು ಸರಿಯಾಗಿ ಕೈಸೇರುತ್ತಿರಲಿಲ್ಲ. ಅವರು ದೇವರ ಕೊಲ್ಲಿಯ ಹೆದ್ದಾರಿ ಪಕ್ಕ ಟೀ, ಕಾಫಿ, ಎಳನೀರು ಮಾರುವ ಪುಟ್ಟ ಕ್ಯಾಂಟೀನ್ ಆರಂಭಿಸಿದ್ದರು. ಈ ನಡುವೆ, ಅಡಿಕೆ ಪತ್ರಿಕೆಯಲ್ಲಿ ಪ್ರಕಟವಾದ ಎಳನೀರು ಜೆಲ್ಲಿ ಉತ್ಪನ್ನದ ಕುರಿತ ಲೇಖನ ಆಕರ್ಷಿಸಿತು. ಥಾಯ್ಲಾಂಡ್ ದೇಶದಲ್ಲಿ ಜನಪ್ರಿಯವಾಗಿರುವ ಈ ಉತ್ಪನ್ನದ ಕುರಿತ ಲೇಖನ ನೋಡಿಯೇ ಎಳನೀರು ಜೆಲ್ಲಿತಯಾರಿಸಿದರು ವಸಂತಲಕ್ಷ್ಮಿ.

ಬಳಿಕ ಧೈರ್ಯವಾಗಿ ತಮ್ಮ ಕ್ಯಾಂಟೀನಿನಲ್ಲಿ ಜೆಲ್ಲಿಮಾರಾಟ ಶುರು ಮಾಡಿದರು. ಕ್ರಮೇಣ ಗ್ರಾಹಕರು ಇದರ ರುಚಿ ಹಿಡಿದು, ಕ್ಯಾಂಟೀನನ್ನು ಹುಡುಕಿ ಬಂದು ಜೆಲ್ಲಿ ತಿಂದು ಪಾರ್ಸೆಲ್ ಕೊಂಡು ಹೋಗುವಷ್ಟು ಜನಪ್ರಿಯವಾಯಿತು. ಎಳನೀರು ಖರೀದಿಸಿ 2 ದಿನದ ಬಳಿಕ ಬಳಕೆಗೆ ಯೋಗ್ಯವಾಗಿರಲ್ಲ. ಜೆಲ್ಲಿ ತಯಾರಿಸಿದರೆ ಆರ್ಥಿಕ ಲಾಭ ಇದೆ ಎಂಬ ಅಂಶ ವಸಂತ ಲಕ್ಷ್ಮಿ ಅವರು ಉದ್ಯಮ ದಲ್ಲಿ ಮುಂದುವರಿಯಲು ಪ್ರೇರೇಪಿಸಿತು. ಎಳನೀರು ಖರೀದಿಸಿ ಉದ್ದಿಮೆ ನಡೆಸುತ್ತಿದ್ದಾರೆ.

ಸರಳ ವಿಧಾನ, ಬಂಡವಾಳ ಬೇಡ: ಎಳನೀರು ಹಾಗೂ ಅದರ ತಿಳಿಗಂಜಿ ಬಳಸಿ ಸರಳವಾಗಿ ಈ ಜೆಲ್ಲಿ ತಯಾರಿಸಬಹುದು. ಹೆಚ್ಚಿನ ಬಂಡವಾಳವೂ ಬೇಕಿಲ್ಲ. ಸದ್ಯ ದಿನಕ್ಕೆ ಸರಾಸರಿ 50-75 ಕಪ್ ಜೆಲ್ಲಿ ಮಾರಾಟ ಆಗುತ್ತದೆ. ಕೊಡಗಿಗೆ ಭೀಕರ ಪ್ರವಾಹ ಕಾಡುವ ತನಕ ಹಿಂದೆಲ್ಲ ದಿನಕ್ಕೆ 125-150 ಕಪ್ ತನಕ (ಕಪ್‌ಗೆ ₹40) ಮಾರಾಟ ಆಗುತ್ತಿತ್ತು. ಜೆಲ್ಲಿಯನ್ನು ಮೈಸೂರು, ಬೆಂಗಳೂರಿನವರೂ ಪಾರ್ಸೆಲ್ ಮಾಡಿಸಿ ತೆಗೆದುಕೊಂಡು ಹೋಗುತ್ತಾರೆ. ಸಭೆ ಸಮಾರಂಭಗಳಿಗೂ ಇವರು ದೊಡ್ಡ ಪ್ರಮಾಣದಲ್ಲಿ ಜೆಲ್ಲಿ ತಯಾರಿಸಿ ಪೂರೈಸುತ್ತಿದ್ದಾರೆ. ಫ್ರಿಜ್‌ನಿಂದ ತೆಗೆದು ಜೆಲ್ಲಿಯನ್ನು ಥರ್ಮಾಕೂಲ್ ಬಾಕ್ಸಿನಲ್ಲಿ ಇರಿಸಿದರೆ 24 ಗಂಟೆ ತನಕ ಜೆಲ್ಲಿಯನ್ನು ರಕ್ಷಿಸಬಹುದು.



ಜೆಲ್ಲಿ ತಯಾರಿಸುವ ವಿಧಾನ

1 ಲೀಟರ್ ಎಳನೀರಿಗೆ 10 ಗ್ರಾಂ. ಜೈನಾ ಗ್ಯಾಸ್, ಎಳನೀರಿನ ತಿರುಳು ಹಾಗೂ 100 ಗ್ರಾಂ ಸಕ್ಕರೆ ಹಾಕಿ ಕುದಿಸಬೇಕು. ಅದು ತಣಿದ ಬಳಿಕ ಕಪ್‌ಗೆ ಹಾಕಿ ಫ್ರಿಡ್ಜ್‌ನಲ್ಲಿಡಬೇಕು. ಸುಮಾರು 10 ದಿನ ಫ್ರಿಡ್ಜಿನಲ್ಲಿಟ್ಟು ಬಳಸಬಹುದು. 1 ಲೀ. ಎಳನೀರಿನಲ್ಲಿ 7 ಕಪ್ ಜೆಲ್ಲಿ ತಯಾರಾಗುತ್ತದೆ. ಪೇಪರ್ ಗಂಜಿ ರೀತಿಯ ತಿರುಳು ಮಾತ್ರ ಇದಕ್ಕೆ ಉಪಯೋಗ ಆಗುತ್ತದೆ.





23-02-2022 Kp Pg 06

ಅದ್ಭುತವಾದ ಮೌಲ್ಯವರ್ಧಿತ ಉತ್ಪನ್ನ ಎಳನೀರು ಜೆಲ್ಲಿ. ಥಾಯ್ಲಾಂಡ್, ಮಲೇಷಿಯಾದಂಥ ದೇಶಗಳಲ್ಲಿ ಬ್ರಾಂಡಿಂಗ್ ಮಾಡಿದ್ದಾರೆ. ದುರಾದೃಷ್ಟವಶಾತ್ ಕೇರಳ, ಕರ್ನಾಟಕ ಸೇರಿದಂತೆ ಭಾರತದಲ್ಲಿ ಯಾರೂ ಇದನ್ನು ಸರಿಯಾಗಿ ಕಲಿತಿಲ್ಲ.

• **ಶ್ರೀಪಡ್ರೆ**, 'ಅಡಿಕೆ ಪತ್ರಿಕೆ' ಪ್ರಧಾನ ಸಂಪಾದಕ, ಕೃಷಿ ಬರಹಗಾರ

For more information visit University Library Website
Web - uasbagrilibindia.org
E-mail- librarian@uasbangalore.edu.in